ಹೆಚ್ಚು ಜನ ಇದ್ದುದರಿಂದ ಯಾರಿಗೂ ಭಯ ಆಗಲಿಲ್ಲ. ಅಷ್ಟು ದೂರ ನಡೆದು ಬಂದ ದಣಿವು ಆರಿಸಿಕೊಂಡು ಗುಂಪು ಮಾತಿಗೆ ಮುಂದಾಯಿತು.

'ಇಲ್ಲಿ ಹೆಣಗಳು ಬಿದ್ದಿರೋದು ಪಿಡಿಒಗೆ ಗೊತ್ತಿದೆ. ಊರವರಿಗೆ ಗೊತ್ತಾಗಬಾರದು ಅಂತ ಮೋಟರು ಕೆಟ್ಟಿದೆ ಅಂತ ಆಟ ಕಟ್ಟಿರಬೌದು. ಚೇರ್ಮನ್ನರಿಗೂ ವಿಷಯ ಗೊತ್ತಿರುತ್ತೆ. ಮುಂದೇನು ಮಾಡಬೇಕು ಅನ್ನದು ಪಂಚಾಯ್ತಿ ಚೇರ್ಮನ್ನರು ತೀರ್ಮಾನ ಮಾಡಂಗಿಲ್ಲ. ಊರು ಅದನ್ನು ತೀರ್ಮಾನ ಮಾಡಬೇಕು. ಮೊದಲು ಪೊಲೀಸರಿಗೆ ವಿಷಯ ತಿಳಿಸಬೇಕು' ಅಂತ ಯಾರೋ ಒಬ್ಬ ಅಂದ... 'ಮಾತು ಸಾಕು, ಯಾರಾದ್ರೂ ಪೊಲೀಸರಿಗೆ ಫೋನ್ ಮಾಡ್ರಯ್ಯ' ಅಂತ ಮತ್ತೊಬ್ಬ ಹೇಳಿದ. ಅನೇಕರ ಕೈಯಲ್ಲಿ ಮೊಬೈಲುಗಳಿದ್ದರೂ ಯಾರೋ ಪೊಲೀಸರ ಜತೆ ಮಾತಾಡಲು ಮುಂದಾಗಲಿಲ್ಲ. ನಂಗೆ ಸ್ಟೇಷನ್ ನಂಬರ್ ಗೊತ್ತಿಲ್ಲ ಅಂತ ಕೆಲವರು ಇನ್ನು ಕೆಲವರು ನಂದು ಬ್ಯಾಟರಿ ವೀಕಾಗಿದೆ ಅಂತ ಸಬೂಬು ಹೇಳುತ್ತ ಜಾರಿಕೊಂಡರು. ಮೊದ್ಲು ದಾಸಣ್ಣಾರಿಗೆ ಹೇಳನ. ಅವರೇ ಪೊಲೀಸರಿಗೆ ಕಂಪ್ಲೇಂಟು ಕೊಡಲಿ ಎನ್ನುವ ನಿರ್ಧಾರಕ್ಕೆ ಬಂದರು. ಗುಂಪು ಒಟ್ಟಾಗಿ ಊರಿಗೆ ಹಿಂದಿರುಗಿತಲ್ಲದೆ ತಂತಮ್ಮ ಮನೆಗಳಿಗೂ ಹೋಗದೆ ನೇರವಾಗಿ ದಾಸಣ್ಣನ ಮನೆಗೇ ಹೋಗಿ ಅವನಿಗೆ ಸುದ್ದಿ ಮುಟ್ಟಿಸಿದರು.

ಕೆರೆಯಲ್ಲಿ ಹೆಣಗಳು ತೇಲ್ತಿವೆ ಅಂತ ನೋಡಿಬಂದವರು ಹೇಳಿದಾಗ ದಾಸಣ್ಣನಿಗೆ ಅಚ್ಚರಿಯೇನೂ ಆಗಲಿಲ್ಲ. ದಾಸಣ್ಣ ಗ್ರಾಮಪಂಚಾಯ್ತಿಯಲ್ಲಿ ವಿರೋಧ ಪಕ್ಷದ ನಾಯಕ. ಮಾಜಿ ಚೇರ್ಮನ್ನರ ಸ್ವಂತ ತಮ್ಮ. ಮೊದಲೇ ಯಾರೋ ಅವನಿಗೆ ಫೋನಿನಲ್ಲಿ ವಿಷಯ ತಿಳಿಸಿದ್ದರು. ಸುದ್ದಿ ಕೇಳಿ ಅವನಿಗೆ ಸಂತೋಷ ಆಗಿತ್ತು. ಸತ್ತಿರೋರು ಯಾರಾದರೂ ಇರಲಿ, ಚೇರ್ಮನ್ನರನ್ನು ಒಂದು ಸಲ ಪಂಚಾಯ್ತಿ ಕಟ್ಟೆಗೆ ಕರೆಸಿ ವಿಚಾರಣೆ ಮಾಡಬೇಕು ಅನ್ನೋ ತನ್ನ ಆಸೆ ನನಸಾಗುವ ಕಾಲ ಹತ್ತಿರ ಬಂತು ಅಂತ ಅನ್ನಿಸಿ ಮನಸ್ಸಿನಲ್ಲಿ ಖುಷಿ ಪಟ್ಟಿದ್ದ.

'ಹೆಣಗಳಿಗೆ ಕೊರೊನಾ ಇದ್ದರೆ ಕೆರೆ ನೀರನ್ನ ಕುಡಿಯಕಾಗಲ್ಲ. ಮೊದಲು ಕೆರೆಯನ್ನು ಖಾಲಿ ಮಾಡಿಸು ಅಂತ ಆ ಚೇರ್ಮನ್‌ಗೆ ಹೇಳಬೇಕು... ಕೆರೆ ಖಾಲಿಯಾದ ಮೇಲೆ ಊರ ಜನಕ್ಕೆ ಅದೆಲ್ಲಿಂದ ನೀರು ಕೊಡ್ತಾನೊ ನೋಡನ...' ಅಂತ ದಾಸಣ್ಣ ಎಲ್ಲರಿಗೂ ಕೇಳಿಸುವಂತೆ ಹೇಳಿದ.



'ಅಣ್ಣಯ್ಯ ಊರಲ್ಲಿಲ್ಲ... ಅವರಿದ್ದರೆ ಮುಂದೇನು ಮಾಡಬೇಕು ಅಂಬದನ್ನು ತೀರ್ಮಾನ ಮಾಡತಿದ್ರು. ಅಮರಾಪುರಕ್ಕೆ ನೆಂಟರ ಮನೆಗೆ ಅಂತ ಬೆಳಿಗ್ಗೆನೇ ಹೋದರು. ಸ್ವಲ್ಪ ಹೊತ್ತು ಬಿಟ್ಟು ನಾನೇ ಫೋನ್ ಮಾಡಿ ಅವರಿಗೆ ವಿಷ್ಯ ತಿಳಿಸ್ತೀನಿ. ಯಾರಾದರೂ ಹೋಗಿ ಪಿಡಿಒ ಇದಾನೇನೊ ನೋಡಿ ಬರ್ರಿ' ಅಂತ ಗುಂಪಿನಲ್ಲಿದ್ದವರಿಗೆ ಹೇಳಿದ.

★★★

ರಾತ್ರಿ ಎಂಟರ ಹೊತ್ತಿಗೆ ದಾಸಣ್ಣನ ಮನೆಯ ಅಂಗಳದಲ್ಲೇ ಊರ ಪ್ರಮುಖರು ಅಂದರೆ ಚೇರ್ಮನ್ನರ ವಿರೋಧಿಗಳೆಲ್ಲ ಸಭೆ ಸೇರಿದರು. ಕೆರೆಯಲ್ಲಿ ಹೆಣಗಳು ಬಿದ್ದಿರೋದು ಚೇರ್ಮನ್ನರಿಗೆ ಮತ್ತು ಪಿಡಿಒಗೆ ಮೊದಲೇ ಗೊತ್ತಿದ್ದರೂ ಪೊಲೀಸರಿಗೆ ದೂರು ಕೊಡದೆ ತಪ್ಪು ಮಾಡಿದ್ದಾರೆ. ನಾಳೆ ಊರವರ ಸಮ್ಮುಖದಲ್ಲಿ ಊರಬಾಗಿಲ ಹನುಮಂತರಾಯನ ಗುಡಿ ಕಟ್ಟೆಮೇಲೆ ಪಂಚಾಯ್ತಿ ಸೇರಿಸ್‌ಬೇಕು. ಅಲ್ಲಿಗೆ ಇಬ್ರನ್ನೂ ಕರೆಸಿ ವಿಚಾರಣೆ ನಡೆಸಬೇಕು ಅಂತ ಸಭೆ ತೀರ್ಮಾನಿಸಿತು. 'ಕೆರೆಯಲ್ಲಿ ಹೆಣಗಳು

